


ಪರೇಡ್ ನಡೆಸುವವರ ಥರ ಸಾಲುಹಚ್ಚಿದ್ದವು. ಗಿಡದ ಬುಡದಲಿ ಗಟಾರೊಂದನ್ನು ಮಾಡಿದ್ದರಿಂದ ಅಲ್ಲಿ ಹಂದಿಗಳ ಗುಂಪು ಆಗೀಗ ನಿದ್ದೆ ಹೋಗಿರುತ್ತಿದ್ದವು. ನಿತ್ಯವೂ ಆಲದ ಗಿಡ ಅನೇಕರ ಪಾಲಿಗೆ ಅಂದಂದಿನ ಅನ್ನಕ್ಕೂ ದಾರಿಯಾಗಿತ್ತು. ಎಗ್ರೈಸ್ ಅಂಗಡಿ ಬಿಸ್ಮಿಲ್ಲಾ, ಪ್ಯಾರಲ ಹಣ್ಣ ಮಾರೋ ಮಂಜಾ, ಮನೆಯಿಂದ ಮಾರಲು ಅಂತಲೇ ಮಾಡಿಕೊಂಡು ತಂದಿರ್ತಿದ್ದ ಉಳ್ಳಾಗಡ್ಡಿ ಭಜಿಗಳೊಂದಿಗೆ ಹುಸೇನವ್ವನೂ ಸೇರಿ ಎಲ್ಲಾರೂ ಚೂರು ಹೆಚ್ಚು ಕಡಮಿ ಟೈಮಿಗೆ ಹಾಜರಾಗಿ ಬಿಡತ್ತಿದ್ದರು. ಬೆಳಗ್ಗೆ ಹತ್ತರ ವೇಳೆಗೆ ಇವರೆಲ್ಲ ನವೋದಯ ನಗರ ಬಸ್‌ಸ್ಟಾಪ್ ಹತ್ತಿರದ ತಮ್ಮ ಖಾಯಂ ಜಾಗೆ ಅನ್ನೋವಂತಾಗಿದ್ದ ಆ ಆಲದ ಗಿಡದ ಆಜುಬಾಜು ಹಾಜರಾಗಿ ಬಿಡುತ್ತಿದ್ದರು. ಒಬ್ಬರ ಮುಖ ಒಬ್ಬರು ನೋಡಿಕೊಂಡೇ ಮುಗುಳ್ನಕ್ಕು ವ್ಯಾಪಾರಕ್ಕಿಳಿದರೂ, ಉಳಿದ ಯಾರದಾದರೂ ಅಂಗಡಿ ಮುಂದೆ ಹೆಚ್ಚಿಗೆ ಮಂದಿ ಕಂಡುಬಂದರೆ ಇವರ ಮನಸಿನಲ್ಲಿ ಒಂಥರದ ಕಸಿವಿಸಿ. ನವೋದಯ ನಗರಕ್ಕೆ ಮತ್ತೆ ಅಲ್ಲಿಂದ ಬೇರೆ ಏರಿಯಾಗಳಿಗೆ ಹೋಗೋ ಬಸ್‌ಗಳೆಲ್ಲಾ ಆಲದ ಗಿಡದ ಬುಡದಲ್ಲೇ ಬಂದು ನಿಲ್ಲುತ್ತಿದ್ದವು. ಮೊದಲಿಂದಲೂ ಅಲ್ಲೇ 'ಕೋರಿಕೆಯ ಬಸ್ ನಿಲುಗಡೆ ಅನ್ನೋ ಬೋರ್ಡ್' ಒಂದನ್ನು ಬಿಟ್ಟರೆ, ಅದು ಬಸ್ ಸ್ಟಾಪ್ ಎಂಬುದು ಬಸ್ ನಿಂತ ಮೇಲೆಯೇ ಗೊತ್ತಾಕ್ಕಿತ್ತು. ಅದೇ ಏರಿಯಾದ ಕಾರ್ಪೋರೇಟರ್ ಹುಬ್ಬಳ್ಳಿ-ಧಾರವಾಡ ಅವಳಿ ನಗರಕ್ಕೆ ಮೇಯರ್